ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Friday, 1st December 1972 (Mārgāsira 10, 1894 S.E.)

The House met in the Assembly Chamber, Vidhana Soudha, at Nine of the Clock.

MADAM SPEAKER [SMT. K. S. NAGARATHNAMMA] in the Chair.

STARRED QUESTIONS

(to which oral answers were given)

SMUGGLING OF SANDALWOOD IN SHIMOGA AND DHARWAR DISTRICTS.

1. Sri S. BANGARAPPA (Sorab).—

Will the Minister for Agriculture and Forests be pleased to state:—

(*a*) whether it has come to the notice of the Government that smuggling of the sandalwood is rampant in the State specially in Shimoga and Dharwar Districts;

(*b*) if so, the number of cases the Government has so far registered against the offenders and the number of persons convicted;

(*c*) the action Government has taken to curb down smuggling of sandalwood?

Sri K. H. PATIL (Minister for Agriculture and Forests)

(*a*) Increased cases of smuggling of sandal had been noticed by Government but these have been now brought down.

(*b*) The number of cases registered and convicted for the years 1969 to 1972 are given below:

	District	*No. of cases Registered*	*No. of persons convicted*	*Remarks*
1	Dharwar ..	71	9	
2	Shimoga ..	107	26	Most of the cases are still pending in court.

(SRI K. H. PATIL)

(c) Several measures have been taken to curb down smuggling of sandalwood of which the following are significant :

(1) Departmental action against 31 subordinates who are suspected of having connived with sandal smuggling has been taken up.

(2) Checking of the valuable sandal forest has been

(3) Rewards have been ordered to informants.

ಶ್ರೀ ಎಸ್. ಬಂಗಾರಪ್ಪ.—ಕಳ್ಳಸಾಗಣಿಕೆಯ ಪ್ರಕರಣಗಳು ಸರ್ಕಾರದವರ ಗಮನಕ್ಕೆ ಬಂದು ಅವುಗಳನ್ನು ಇತ್ತೀಚೆಗೆ ಕಡಮೆ ಗೊಳಿಸಲಾಗಿದೆ ಎಂದು ಹೇಳಿದೆ. ಹೀಗೆ ಕಡಮೆ ಗೊಳಿಸುವುದಕ್ಕೆ ಸರ್ಕಾರ ಕೈಗೊಂಡ ಕಾರ್ಯಕ್ರಮಗಳೇನು ?

† ಶ್ರೀ ಕೆ. ಎಚ್. ಪಾಟೀಲ್.—ನಮ್ಮ ಅಧಿಕಾರಿಗಳ ಮೂಲಕ ಒಳ್ಳೇ ದಕ್ಷತೆಯಿಂದ ಕೇಸುಗಳನ್ನು ಹಿಡಿಯುವುದಕ್ಕೆ ಪ್ರೋತ್ಸಾಹ ನೀಡಲಾಗಿದೆ. ಅಲ್ಲದೆ ಪೋಲೀಸರ ಮೂಲಕವೂ ಕೇಸುಗಳನ್ನು ಪತ್ತೆಹಚ್ಚಿಸಿ ಖಚ್ಚೆಗಳನ್ನು ಹಾಕಿಸಿ, ಕೋರ್ಟಿನಲ್ಲಿ ಶಿಕ್ಷೆವಿಧಿಸುವಂತೆ ಪ್ರಯತ್ನ ಮಾಡಲಾಗಿದೆ. ಚೆಕ್‌ಪೋಸ್ಟ್‌ಗಳಲ್ಲಿ. ಹೆಚ್ಚಿನ ಉತ್ಸುಕತೆಯಿಂದಲೂ ಚುರುಕಿನಿಂದಲೂ ಕೆಲಸ ಮಾಡಲು ಪ್ರಯತ್ನಗಳನ್ನು ಮಾಡಿದೆ. ಸರ್ಕಾರ ಕೂಡ ಆಗಿಂದಾಗ್ಗೆ ಈ ಬಗ್ಗೆ ಸರ್‌ಪ್ರೈಜ್ ಚೆಕ್ಕಿಂಗನ್ನು ನಡೆಸುತ್ತಿದೆ. ಈ ಎಲ್ಲಾ ಪ್ರಯತ್ನಗಳಿಂದ ಇತ್ತೀಚೆಗೆ ಗಂಧದ ಕಳವಿನ ಪ್ರಕರಣಗಳು ಕಡಮೆ ಆಗಿವೆ.

ಶ್ರೀ ಎಸ್. ಬಂಗಾರಪ್ಪ.—ಕಾರವಾರ, ಧಾರ್ವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಗಂಧದ ಕಳ್ಳಸಾಗಾಣಿಕೆ ಕಾರುಗಳಲ್ಲಿ ಮತ್ತು ಲಾರಿಗಳಲ್ಲಿ ಬೊಂಬಾಯಿಗೆ ನಡೆಯುತ್ತಿದೆ. ಹೀಗೆ ನಡೆಯುವುದಕ್ಕೆ ಇಲಾಖೆಯಲ್ಲಿರತಕ್ಕ ಕೆಲವು ಅಧಿಕಾರಿಗಳ ನಂಟಿಲ್ಲದೆ ಅದು ಸಾಧ್ಯವಿಲ್ಲ ಎಂಬುದಾಗಿ ಹೇಳಲಾಗುತ್ತಿದೆ. ಅದರ ಬಗ್ಗೆ ಸರ್ಕಾರದವರೇನು ಕ್ರಮ ಗೊಂಡಿದ್ದಾರೆ ?

ಶ್ರೀ ಕೆ. ಎಚ್. ಪಾಟೀಲ್.—ತಾವು ಹೇಳತಕ್ಕದ್ದನ್ನು ನಾನು ಸಂಪೂರ್ಣವಾಗಿ ಒಪ್ಪುವುದಕ್ಕಾಗದೆ ಇದ್ದರೂ, ಇತ್ತೀಚೆಗೆ ನಾನು ಈಗಾಗಲೇ ಗುಮಾನಿ ಕಂಡ ಅಧಿಕಾರಿಗಳ ಬಗ್ಗೆ ಕಾರ್ಯಕ್ರಮಗಳನ್ನೂ ಕೈಗೊಂಡಿರುವುದರಿಂದ ಅಧಿಕಾರಿಗಳಲ್ಲಿ ಒಂದು ಹೆಚ್ಚಿನ ಭಯವುಂಟಾಗಿದೆ. ಆದುದರಿಂದ ನಧ್ಯದಲ್ಲಿ ಯಾರು ಪ್ರತ್ಯಕ್ಷವಾಗಿ ಆಗಲೀ ಪರೋಕ್ಷವಾಗಿ ಆಗಲಿ ಇದರಲ್ಲಿ ಕೈಹಾಕುವುದಕ್ಕೆ ಸಾಧ್ಯವಿಲ್ಲ. ಅಂಥ ಯಾವುದಾದರೂ ಪ್ರಕರಣ ತಮ್ಮ ಗಮನಕ್ಕೆ ಬಂದಿದ್ದರೆ ತಿಳಿಸಿ, ನಾನು ತಕ್ಷಣ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಕೇಸುಗಳನ್ನು ಹಿಡಿಯುವುದಕ್ಕೆ ಸಹಕಾರ ನೀಡಿದ ಜನತೆಗೆ ಇಲ್ಲಿಯವರೆಗೆ ಸರ್ಕಾರದವರು ಎಷ್ಟು ಬಹುಮಾನ ಕೊಟ್ಟಿದ್ದಾರೆ ?

ಶ್ರೀ ಕೆ. ಎಚ್. ಪಾಟೀಲ್.—ಮೊನ್ನೆತಾನೆ ಒಂದು ಲಕ್ಷ ರೂಪಾಯಿ ಗಂಧದ ಕಳ್ಳಸಾಗಾಣಿಕೆಯನ್ನು ಹಿಡಿದವರಿಗೆ ದೊಡ್ಡ ಮೊತ್ತದ ಬಹುಮಾನವನ್ನು ಕೊಡುವುದಕ್ಕೆ ಶಿಫಾರ್ಸು ಮಾಡಬೇಕು ಎಂಬುದಾಗಿ ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಅವರಿಗೆ ಹೇಳಿದ್ದೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—(ಬ) ಗೆ ಉತ್ತರವಾಗಿ 'ಬಹುಮಟ್ಟಿನ ಪ್ರಕರಣಗಳು' ಪೆಂಡಿಂಗ್ ಇರುತ್ತವೆಂದು ಹೇಳಲಾಗಿದೆ. ಈ ಕೆಲಸಗಳನ್ನು ಇಂತಿಷ್ಟೇ ಅವಧಿಯಲ್ಲಿ ತೀರ್ಮಾನ ಮಾಡಬೇಕೆಂದು ಒಂದು ಕಾಲ ನಿಗದಿಯನ್ನು ನೂಚಿಸುವುದಕಾಗುವುದಿಲ್ಲವೇ ! ಹಾಗೆ ಸೂಚನೆ ಮಾಡದಿದ್ದರೆ ಅನೇಕ ಅಧಿಕಾರಿಗಳು ಅಂದರೆ ಯಾರು ಈ ಕೇಸುಗಳನ್ನು ಇನ್‌ವೆಸ್ಟಿಗೇಟ್ ಮಾಡಿರುತ್ತಾರೋ ಅವರು ರಿಟೈರಾಗಿರುತ್ತಾರೆ, ಇಲ್ಲವೆ ಬೇರೆ ಜಾಗಕ್ಕೆ ವರ್ಗವಾಗಿರುತ್ತಾರೆ, ಈ ಕೇಸುಗಳು ತೀರ್ಮಾನವಾಗುವಾಗ್ಗೆ. ಆದ್ದರಿಂದ ಕಾಲನಿಗದಿ ಮಾಡುವುದು ಅಗತ್ಯವಲ್ಲವೇ ?

† Indicates that the remarks or speeches have not been revised by the member concerned.

ಶ್ರೀ ಕೆ. ಎಚ್. ಪಾಟೀಲ್.—ಈಗ ಇಲ್ಲಿ ಹೇಳಿರತಕ್ಕ ಖಚ್ಚೆಗಳು ಬಹಳ ದಿವಸಗಳಿಂದಲೂ ಅಂದರೆ ಹಿಂದಿನ ಕೇಸುಗಳೂ ಸೇರಿ ಪೆಂಡಿಂಗ್ ಇರುತ್ತವೆ. ಅವುಗಳನ್ನು ತೀವ್ರ ನಿಖಾಲೆ ಮಾಡುವಂತ ಪ್ರಾರ್ಥಿಸಿದ್ದೇವೆ. ಆದರೆ ಕೇಸ್‌ಗಳು ನಮ್ಮ ಹಿಡಿತದಲಿಲ್ಲ. ಆದಾಗ್ಯೂ ಮಾನ್ಯ ಸದಸ್ಯರು ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದುದರಿಂದ ನಾನು ನಮ್ಮ ಚೀಫ್ ಜಸ್ಟೀಸ್ ಅವರಿಗೆ ಈ ಖಚ್ಚೆಗಳನ್ನು ಬೇಗ ನಿಖಾಲೆ ಮಾಡುವಂತೆ ಒಂದು ಪತ್ರವನ್ನು ಬರೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈ ಕಳ್ಳತನವನ್ನು ನಿಲ್ಲಿಸುವುದಕ್ಕೆ ಇನ್ನೂ ಬಿಗಿಯಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುವರೇ?

ಶ್ರೀ ಕೆ. ಎಚ್. ಪಾಟೀಲ್.—ಸಾಧ್ಯವಾದ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಬಹುಮಾನ ಕೊಡತಕ್ಕದ್ದನ್ನು ಮುಂಚಿತವಾಗಿಯೇ ಜನರಿಗೆ ಪ್ರಚಾರ ಮಾಡಿದ್ದೀರಾ?

ಶ್ರೀ ಕೆ. ಎಚ್. ಪಾಟೀಲ್.—ಹಾಗೆ ಮಾಡುವುದು ಸೂಕ್ತವಾದುದಲ್ಲ. ಒಂದು ಸಂದರ್ಭದಲ್ಲಿ ದೊಡ್ಡ ಪೊತ್ತದ ನಾಟಾ ಕಳವನ್ನು ಸರ್ಕಾರದವರ ನಜರಿಗೆ ತಂದ ಸಂದರ್ಭದಲ್ಲಿ ಹಿಂದೆ ಒಬ್ಬ ವ್ಯಕ್ತಿಗೆ ೫ ಸಾವಿರ ರೂಪಾಯಿಗಳ ಬಹುಮಾನ ನೀಡಲಾಗಿದೆ.

SCHEDULED CASTES AND SCHEDULED TRIBES EMPLOYEES IN AIDED INSTITUTIONS IN HYDERABAD KARNATAK AREA.

12. Sri MALLIKARJUN KHARGE (Gurmitkal).—

Will the Minister for Education be pleased to state:—

(*a*) the number of private educational institutions in the State aided by Government;

(*b*) the number of private educational institutions in Hyderabad Karnatak area aided by Government;

(*c*) the number of employees working in Government aided institutions in the State and of them, the number of employees belonging to Scheduled Castes/Scheduled Tribes;

(*d*) the number of employees working in Government aided institutions in Hyderabad Karnatak area and of them, the number of employees belonging to Scheduled Castes/Scheduled Tribes;

(*e*) whether the Government has taken any steps to maintain percentage fixed in respect of appointment of scheduled castes and tribes in the Government aided institutions?

Sri A. R. BADARINARAYANA (Minister for Education).—

(*a*) 3,642.

(*b*) 121.